4) ಎ.ಎಸ್.ಪಾಟೀಲ್ ಪುನರ್ವಸತಿ ಅಧಿಕಾರಿ, ಯು.ಕೆ.ಪಿ.ಹೆಣಸಗಿ.	ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ಬಿಜಾಪುರ
5) ಕೆ.ವಿ.ನಂಜುಂಡೇಗೌಡ ಜಿಲ್ಲಾಧಿಕಾರಿಗಳ ಕೇಂದ್ರ ಸ್ಥಾನ ಸಹಾಯಕರು, ಕೋಲಾರ	ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ
6) ರಾಮಾಂಜನೇಯ, ಪ್ರಾಂಶುಪಾಲರು ಜಿಲ್ಲಾ ತರಭೇತಿ ಸಂಸ್ಥೆ ಹಾಸನ	ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಹಾಸನ.
7) ಎಸ್ ರಾಧಾಕೃಷ್ಣ ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಬೆಂಗಳೂರು ನಗರ.	ಪೌರಾಡಳಿತ ನಿರ್ದೇಶಕರು ಕೇಂದ್ರ ಸ್ಥಾನ ಸಹಾಯಕ ಬೆಂಗಳೂರು.
8) ಸಿ.ಎಂ. ಈಶ್ವರ್, ಆಡಳಿತಾಧಿಕಾರಿ, ವಾಯು ಮಾಲಿನ್ಯ ಮಂಡಳಿ, ಬೆಂಗಳೂರು.	ಉಪ ವಿಭಾಗಾಧಿಕಾರಿ, ನಂಜನಗೂಡು.

ಬೆಂಗಳೂರು ನಗರದಲ್ಲಿ ವರ್ತುಲ ರಸ್ತೆ ನಿರ್ಮಾಣ.

382(400) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದಿಂದ ಬೆಂಗಳೂರು ನಗರದಲ್ಲಿ ವರ್ತುಲ ರಸ್ತೆ ನಿರ್ಮಾಣಕ್ಕೆ ಹಿಂದಿನ ವರ್ಷ ಮಂಜೂರಾದ ಹಣವೆಷ್ಟು?

ಆ) ಇದರಲ್ಲಿ ಎಷ್ಟು ಹಣ ಖರ್ಚು ಮಾಡಿದೆ?

ಇ) ಕೆಲಸ ಯಾವ ಹಂತದಲ್ಲಿದೆ ಮತ್ತು ಯಾವ ವೇಳೆಗೆ ಮುಕ್ತಾಯವಾಗುತ್ತದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪ್ರಾಧಿಕಾರದ್ದೇ ಹಣದಿಂದ 62.09 ಕಿ.ಮೀ ದೂರ ವರ್ತುಲ ರಸ್ತೆ ಮತ್ತು 3.5 ಕಿ.ಮೀ ಮಧ್ಯಂತರ ವರ್ತುಲ ರಸ್ತೆಯನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಇದೆ.

ಹೊರ ವರ್ತುಲ ರಸ್ತೆ:

(1) 15.85ಕಿ.ಮೀ ಉದ್ದ ರಸ್ತೆ ಕಲಸ ಮುಕ್ತಾಯವಾಗಿದೆ ಮತ್ತು 11.20ಕಿ.ಮೀ ಉದ್ದ ರಸ್ತೆಯ ನಿರ್ಮಾಣವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಾಗವಿರುವೆಡೆಯಲ್ಲಿ ಪ್ರಗತಿಯಲ್ಲಿದೆ ಉಳಿದ ರಸ್ತೆ ನಿರ್ಮಾಣವನ್ನು ಜಾಗವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಪಡೆದ ಮೇಲೆ ಪ್ರಾರಂಭಿಸಲಾಗುವುದು.

(2) **ಮಧ್ಯಂತರ ವರ್ತುಲ ರಸ್ತೆ:**

1.9 ಕಿ.ಮೀ ಉದ್ದದ ರಸ್ತೆಯು ಡಿಫೆನ್ಸ್ ಜಾಗದಲ್ಲಿ ಹಾಯ್ದು ಹೋಗುವುದು. ಇದನ್ನು ಪಡೆಯಲು ಸಂಬಂದಿಸಿದವರೊಂದಿಗೆ ಮಾತುಕತೆ ನಡೆಯುತ್ತಿದೆ. ವರ್ತುಲ ರಸ್ತೆಯ ನಿರ್ಮಾಣ ಕಾರ್ಯವನ್ನು 1995ರ ಕೊನೆಯ ಹೊತ್ತಿಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.